E-MAIL info@rjdcemys.in & jdmysore@gmail.com
Website www.rjdcemys.in
Phone 0821-2426696
Fax 0821-2428696

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಪ್ರಾಕಮೈ/ಕಾಶಿಇ/66/ಅಉಸಂ/2018-19

ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ,
ವಿನೋಬ ರಸ್ತೆ, ಮೈಸೂರು-570 005
ದಿನಾಂಕ:25-9-2018

# ಸುತ್ತೋಲೆ

ವಿಷಯ : 2017-18ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಏಪ್ರಿಲ್ - 2018 ಮತ್ತು ಮೇ-2018ರ ಮಾಹೆಗಳ ಗೌರವ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : ಕಾಲೇಜು ಶಿಕ್ಷಣ ಆಯುಕ್ತರ ಕಚೇರಿ ಅನುದಾನ ಬಿಡುಗಡೆ ಆದೇಶ ಸಂಖ್ಯೆ : ಕಾಶಿಆ/16/ ಅಉಗೌಧ/ ಆಯವ್ಯಯ/2018-19, ದಿನಾಂಕ 24-9-2018

*******

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅನುದಾನ ಬಿಡುಗಡೆ ಆದೇಶದಲ್ಲಿ 2017-18ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಏಪ್ರಿಲ್ - 2018 ಮತ್ತು ಮೇ-2018ರ ಮಾಹೆಗಳ ಗೌರವ ಧನ ಪಾವತಿಸಲು ಲೆಕ್ಕ ಶೀರ್ಷಿಕೆ 2202-03-103-2-01(051) (ಇತರೆ ಸರ್ಕಾರಿ ಕಾಲೇಜುಗಳು)ರಡಿಯಲ್ಲಿ ಅನುದಾನ ಬಿಡುಗಡೆ ಮಾಡಿರುವುದರಿಂದ ಈ ಕೆಳಕಂಡ ಸೂಚನೆಗಳನ್ವಯ ಅವಶ್ಯ ಬೇಡಿಕೆ ಪಟ್ಟಿಯನ್ನು **ದಿನಾಂಕ 28-09-2018ರೊಳಗೆ ಕಳುಹಿಸಿಕೊಡುವಂತೆ** ಸೂಚಿಸಿದೆ.

ನಮೂನೆ

| ಕ್ರ.ಸಂ | ಕಾಲೇಜಿನ ಹೆಸರು | ಖಜಾನೆ-2 ಡಿಡಿಒ ಸಂಖ್ಯೆ | ಏಪ್ರಿಲ್ - 2018 | ಮೇ-2018ರ | ಒಟ್ಟು |
|---|---|---|---|---|---|
| | | | | | |

**ಸೂಚನೆಗಳು:**

1) ಈ ಕಚೇರಿಯಿಂದ ಅನುಮೋದನೆಗೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಏಪ್ರಿಲ್ - 2018 ಮತ್ತು ಮೇ-2018ರ ಅವಶ್ಯ ಬೇಡಿಕೆ **e-MIS Salary Budget** ಪ್ರತಿಯನ್ನು ಪ್ರಾಂಶುಪಾಲರ ಸಹಿ/ಮೊಹರಿನೊಂದಿಗೆ ಒಟ್ಟು ಮೊತ್ತವನ್ನು ಕ್ರೂಢೀಕರಿಸಿ ನಮೂದಿಸಿ ಕಳುಹಿಸಿಕೊಡುವುದು.
2) ಅತಿಥಿ ಉಪನ್ಯಾಸಕರುಗಳ ಅನುಮೋದನೆಯಾಗದಿರುವ ಕಾಲೇಜುಗಳ ಪ್ರಾಂಶುಪಾಲರುಗಳು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ, ಕೂಡಲೇ ಅನುಮೋದನೆ ಪಡೆದುಕೊಳ್ಳುವುದು. ತಪ್ಪಿದ್ದಲ್ಲಿ ಅನುದಾನವನ್ನು ಬಿಡುಗಡೆ ಆಗದಿರುವುದಕ್ಕೆ ತಮ್ಮನ್ನೆ ಹೊಣೆಗಾರರನ್ನಾಗಿಸಲಾಗುವುದು.
3) ನಮ್ಮ ಕಚೇರಿಯಿಂದ ಅನುಮೋದನೆಗೊಂಡಿರುವ ಅತಿಥಿ ಉಪನ್ಯಾಸಕರುಗಳ ಆದೇಶದ ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸುವುದು.
4) ಬೇಡಿಕೆ ಪಟ್ಟಿಯನ್ನು ಮೇಲಿನ ನಮೂನೆಯಲ್ಲಿಯೇ ನೀಡತಕ್ಕದ್ದು. ಮಾಹಿತಿ ತಪ್ಪಾಗಿ ನೀಡಿದ್ದಲ್ಲಿ ಸರಿಪಡಿಸಿ ನೀಡುವವರೆಗೆ ಅನುದಾನ ತಡೆಹಿಡಿಯಲಾಗುವುದು.
5) ಬೇಡಿಕೆ ಪಟ್ಟಿಯನ್ನು ಮತ್ತು **e-MIS Salary Budget** ಈ ಕಛೇರಿ ಇ-ಮೇಲ್ ವಿಳಾಸ guestfacultyjdmysore@gmail.com ಗೆ ತುರ್ತಾಗಿ ಸಲ್ಲಿಸಲು ಸೂಚಿಸಲಾಗಿದೆ

ಜಂಟಿ ನಿರ್ದೇಶಕರು
ಪ್ರಾದೇಶಿಕ ಜಂಟಿ ನಿರ್ದೇಶಕರು
ಕಾಲೇಜು ಶಿಕ್ಷಣ ಇಲಾಖೆ,
ಮೈಸೂರು - 570 005

ಇವರಿಗೆ,

ವಲಯದ ಎಲ್ಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮಾಹಿತಿ ಹಾಗೂ ತುರ್ತು ಕ್ರಮಕ್ಕಾಗಿ

ಪ್ರತಿ:

1) ಕಚೇರಿಯ ಎಲ್ಲ ಅಧಿಕಾರಿ/ಸಿಬ್ಬಂದಿ ವರ್ಗದವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ
2) ಕಚೇರಿ ಪ್ರತಿ